Karnataka Veterinary, Animal & Fisheries Sciences University, Bidar
ಕರ್ನಾಟಕ, ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

ಡೀನ್‌ರವರ ಕಾರ್ಯಾಲಯ
ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

Office of the Dean
Veterinary College, BIDAR

ಸಂಖ್ಯೆ ಡೀನ್/ಪವೈಮ(ಬೀ)/ಬೋ.ಸಿ.ಗು.ನೇ/2022-23 ದಿನಾಂಕ 20-01-2023

Veterinary College, BIDAR
Sl. No: 1337 Date: 21/01/23

# ಅಧಿಸೂಚನೆ

**ವಿಷಯ :** ಗುತ್ತಿಗೆ ಆಧಾರದ ಮೇಲೆ ಭೋಧಕ ಸಿಬ್ಬಂದಿಗಳ ನೇಮಕಾತಿ - ಕುರಿತು

**ಉಲ್ಲೇಖ:** ವಿಶ್ವವಿದ್ಯಾಲಯದ ಆದೇಶ ಸಂಖ್ಯೆ R/VCB/CT/2022-23/2883 Dated: 16-09-2022

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ಎದುರಾಗಿ 179 ದಿನಗಳಿಗೆ ಮೀರದಂತೆ ಭೋಧಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ವಿಶ್ವವಿದ್ಯಾಲಯದಿಂದ ಆದೇಶ ಮೇರೆಗೆ ಭೋಧಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಪ್ರಕಟಣೆ ಹೊರಡಿಸಲಾಗಿದೆ. ಸಂಬಂಧಪಟ್ಟ ವಿಷಯದಲ್ಲಿ ಎಮ್‌ವಿಎಸ್‌ಸಿ (MVSc)/ಪಿಎಚ್‌ಡಿ(Ph.D) ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು **ದಿನಾಂಕ 28-01-2023 ಮುಂಜಾನೆ 10.00 ಗಂಟೆಗೆಯ ನಂತರ** ಡೀನ್‌ರವರ ಕಾರ್ಯಾಲಯ, ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನಲ್ಲಿ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದಲಾಗಿದೆ. ಹಾಗೂ ಮೂಲ ದಾಖಲೆಗಳು ಪರಿಶೀಲನೆಗಾಗಿ ಮತ್ತು ಅದರ ನಕಲು ಪ್ರತಿಯನ್ನು ಸಂದರ್ಶನದ ಸಮಯದಲ್ಲಿ ಡೀನ್‌ರವರ ಕಾರ್ಯಾಲಯದಲ್ಲಿ ಸಲ್ಲಿಸಲು ಈ ಮೂಲಕ ಮಾಹಿತಿಸಲಾಗಿದೆ.

ಮುಂದುವರೆದು, ಸದರಿ ಆಯ್ಕೆಗಳು ಕರ್ನಾಟಕ ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ/ಅಧಿಸೂಚನೆ/ಸುತ್ತೋಲೆಯನ್ನು ಪಾಲನೆ ಮಾಡಲಾಗುವುದು.

| ಕ್ರ ಸಂ | ಹುದ್ದೆಯ ಹೆಸರು | ವಿಭಾಗದ | ವೇತನ/ ಸಂಭಾವನೆ | ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಸಹಾಯಕ ಪ್ರಾಧ್ಯಾಪಕರು Assistant Professor | ಪಶುವೈದ್ಯಕೀಯ ಅಂಗರಚನಾಶಾಸ್ತ್ರ Veterinary Anatomy | ರೂ.57600 ಪ್ರತಿ ತಿಂಗಳು) | 01 |
| 2 | ಸಹಾಯಕ ಪ್ರಾಧ್ಯಾಪಕರು Assistant Professor | ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ ವಿಭಾಗ ಪಶುವೈದ್ಯಕೀಯ ಚಿಕಿತ್ಸಾಶಾಸ್ತ್ರ Veterinary Medicine | | 01 |

**ನಿಯಮಗಳು ಮತ್ತು ಷರತ್ತುಗಳು:**

1. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಬಂದು ಸಂದರ್ಶನಕ್ಕೆ ಹಾಜರಾಗಬೇಕು
2. ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮಿನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಅಥವಾ ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ನಿಯಮಾವಳಿಯಂತೆ ಹಾಗೂ ಮಾರ್ಗಸೂಚನೆಯಂತೆ ಭೋಧಕ ಸಿಬ್ಬಂದಿಗಳಿಗೆ ಬೇಕಾದ ಎಲ್ಲ ಅರ್ಹತೆ ಹೊಂದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.
3. ನೇಮಕಾತಿಯು ತಾತ್ಕಾಲಿಕವಾಗಿದ್ದು ಯಾವುದೇ ಸಮಯದಲ್ಲಿ ಯಾವುದೇ ಮಾಹಿತಿ ಮತ್ತು ಕಾರಣ ನೀಡದೆ ತೆಗೆದು ಹಾಕಲಾಗುವುದು ಅಥವಾ ಆದೇಶವನ್ನು ರದ್ದು ಪಡಿಸಲಾಗುವುದು
4. ಗುತ್ತಿಗೆ ಆಧಾರದ ಮೇಲೆ ನೇಮಕಾತಿಯಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಖಾಯಂ, ಹಿರಿತನ, ಸಕ್ರಮಾತಿ, ಪಿ.ಎಫ್ ಮತ್ತು ಇತರೆ ಯಾವುದೇ ತರಹದ ಹಕ್ಕಿಗೆ ಒಳಪಟ್ಟಿರುವುದಿಲ್ಲ.
5. ಕಲ್ಯಣ ಕರ್ನಾಟಕ ಹಾಗೂ ಕರ್ನಾಟಕದ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು

ಡೀನ್(ಪವೈ)

ಡೀನ್(ಪವೈ)
ಪಶುವೈದ್ಯಕೀಯ ಮಹಾವಿದ್ಯಾಲಯ
ನಂದಿನಗರ, ಅ.ಪೆ.ಸಂ. 6, ಬೀದರ

ಪ್ರ.ಅ:

1. ಮಾನ್ಯ ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಶಿವಮೊಗ್ಗ/ಹಾಸನ ಇವರ ಮಾಹಿತಿಗಾಗಿ ಹಾಗೂ ತಮ್ಮ ಮಹಾವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ
2. ಸಂಬಂಧಪಟ್ಟ ವಿಭಾಗಗಳ ಮುಖ್ಯಸ್ತರು ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಇವರ ಮಾಹಿತಿಗಾಗಿ ಸದರಿ ಅಧಿಸೂಚನೆಯನ್ನು ವ್ಯಾಪಕವಾಗಿ ಪ್ರಚುರ ಪಡಿಸಲು ಕೋರಿದೆ
3. ಮಾನ್ಯ ಮಾನ್ಯ ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ಬೀದರ ಇವರ ಮಾಹಿತಿಗಾಗಿ ಮತ್ತು ಸದರಿ ಅಧಿಸೂಚನೆಯನ್ನು ವ್ಯಾಪಕವಾಗಿ ಪ್ರಚುರ ಪಡಿಸಲು ಆದರ ಪೂರ್ವಕವಾಗಿ ಈ ಮೂಲಕ ಕೋರಲಾಗಿದೆ